## ಬಾನೆತ್ತರದ ತೇರು

ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗಿಗಳ ತಪೋಭೂಮಿ ‘ಶಿವಯೋಗ ಮಂದಿರ’ ಈ ತೇರು 65ಅಡಿ ಎತ್ತರವಿದ್ದು, ಏಷ್ಯಾದಲ್ಲಿಯೇ ಎತ್ತರದ ತೇರು ಎಂದು ಪ್ರಖ್ಯಾತಿ ಪಡೆದಿದೆ.

ತೇರಿನ ಸುತ್ತಲೂ ಶಿವಯೋಗಿ ಮಹಾತ್ಮರ ಭಾವಚಿತ್ರದ ಕೆತ್ತನೆ ಇದ್ದು ಅದರ ದರ್ಶನದಿಂದ ಆಧ್ಯಾತ್ಮಿಕ ಲೋಕವನ್ನೇ ಧರೆಗಿಸಿರುವಂತೆ ಮಂತ್ರಮುಗ್ಧಗೊಳಿಸುತ್ತದೆ. ಈ ಮಹಾತ್ಮರ ಭಾವಚಿತ್ರದ ಕೆತ್ತನೆ ಯಾವುದೇ ಹಾನಿಯಾಗಬಾರದೆಂದು ಭಕ್ತ ವೃಂದ ರಥೋತ್ಸವದಲ್ಲಿ ಉತ್ತತ್ತಿ (ಖರ್ಜೂರ), ತೆಂಗಿನಕಾಯಿ ಬದಲಿಗೆ ಹೂವನ್ನು ಅರ್ಪಿಸುತ್ತಾರೆ.

—ಮಹಾಂತೇಶ ಬಾಗೇವಾಡಿ





## ತ್ರಿಲೋಕ ಮಂಟಪ

ಈ ಚಿತ್ರದಲ್ಲಿ ಕಾಣುತ್ತಿರುವ ತ್ರಿಲೋಕ ಮಂಟಪವು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿದೆ. ಈ ಮಂಟಪವನ್ನು ಸ್ವಾದಿ ಅರಸರು ಕಟ್ಟಿಸಿದರು ಎಂದು ಇತಿಹಾಸ ಹೇಳುತ್ತದೆ. ಈ ಮಂಟಪದ ವಿಶೇಷತೆ ಎಂದರೆ ನಾವು ಏಕಕಾಲದಲ್ಲಿ ಮೂರು ಲೋಕಗಳಾದ ಸ್ವರ್ಗ ಲೋಕ, ಭೂ ಲೋಕ ಹಾಗೂ ಪಾತಾಳ ಲೋಕವನ್ನು ನೋಡಬಹುದು. ಸ್ವರ್ಗ ಲೋಕದಲ್ಲಿ ಅಷ್ಟದಿಕ್ಪಾಲಕರು, ಭೂ ಲೋಕದಲ್ಲಿ ಶಿವ ಹಾಗೂ ಪಾರ್ವತಿ ಮತ್ತು ಪಾತಾಳ ಲೋಕದಲ್ಲಿ ನಾಗಶೇಷನನ್ನು ನೋಡಬಹುದು. ಒಂದೇ ಮಂಟಪದಲ್ಲಿ ಸುಂದರವಾಗಿ ಮೂರು ಲೋಕಗಳನ್ನು ಕೆತ್ತಲಾಗಿದ್ದು ಅಮಾವಾಸ್ಯೆ ದಿನದಂದು ಇದಕ್ಕೆ ವಿಶೇಷ ಪೂಜೆ ನಡೆಯುತ್ತದೆ.

—ಸಂಜ್ಞಾ ಪಿ. ಭಟ್ಟ, ಶಿರಸಿ

## ಆಂಟ್ಲಯನ್ ವಿಸ್ಮಯ ಕೀಟ

ನೇತ್ರಾವತಿ ನದಿಯ ದಡದಲ್ಲಿ ನಡೆದುಕೊಂಡು ಹೋಗುವಾಗ ಮರಳ ರಾಶಿಯ ಮೇಲೆ ಪುಟ್ಟ ಗಾತ್ರದ ಕುಳಿಗಳು ಕಂಡು ಬಂದವು. ಗಮನಿಸಿ ನೋಡಿದಾಗ ಸ್ಥಳೀಯವಾಗಿ ಮಣ್ಣ ಗಂಗೆ ಎಂದು ಕರೆಯುವ ಆಂಟ್ಲಯನ್ ಕೀಟಗಳ ಕುಳಿ ಇದು ಎಂದು ಗೊತ್ತಾಯಿತು.

ಸಡಿಲವಾದ ಮಣ್ಣು, ಮರಳಿನ ಬಳಿ ಈ ಕೀಟ ಶಂಕಾಕೃತಿಯಲ್ಲಿ ಕುಳಿ ತೋಡುತ್ತದೆ. 1 ಸೆಂಟಿ ಮೀಟರ್‌ಗಿಂತಲೂ ಕಡಿಮೆ ಉದ್ದದ ಈ ಪುಟ್ಟ ಕೀಟಗಳು ಕುಳಿಯೊಳಗೆ ಬಿದ್ದ ಇತರೆ ಕೀಟಗಳನ್ನು ಭಕ್ಷಿಸುತ್ತವೆ. ಯಾವುದೇ ಕೀಟ ಕುಳಿಯೊಳಗೆ ಬಿದ್ದರೆ ತಪ್ಪಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಕುಳಿಯನ್ನು ಸಡಿಲವಾದ ಮಣ್ಣು, ಮರಳಿನಲ್ಲಿ ತೋಡುವ ಕಾರಣ ಕುಳಿಯೊಳಗೆ ಬಿದ್ದ ಕ್ರಿಮಿಕೀಟಗಳು ಈ ಕೀಟಕ್ಕೆ ಬಲಿಯಾಗುತ್ತವೆ.

ಸಾಮೂಹಿಕವಾಗಿ ಒಂದು ಕಡೆ ಕುಳಿ ತೋಡುವ ಈ ಕೀಟಗಳು ಒಂದು ಕುಳಿಯೊಳಗೆ ಒಂದೇ ಜೀವಿಸುತ್ತವೆ. ದೊಡ್ಡ ಪ್ರಾಣಿಗಳು ಕುಳಿಯ ಹತ್ತಿರ ಬಂದರೆ ಹಾರಿ ಪರಾರಿಯಾಗುತ್ತವೆ. ಜಾಗರೂಕತೆಯಿಂದ ಕುಳಿಯ ಮಣ್ಣನ್ನು ಮೇಲೆ ಕೆದಕಿದರೆ ಈ ಕೀಟ ಸಿಗುತ್ತದೆ.

—ಅರುಣ್ ಕಿಲ್ಲೂರು

